ಕ್ಯಾಕರಿಸುತ್ತಾ ಉಗಿದ. ಕಫದ ಉಂಡೆಯೊಂದು ನನ್ನ ಕಾರಿನ ಮೇಲೆ ಬಿದ್ದು ಉರುಳತೊಡಗಿತು. ಅವನು ಮುಖವನ್ನು ಮತ್ತೆ ಕಿಟಕಿಯೊಳಗೆ ತೂರಿಸುತ್ತಾ ಸುತ್ತ ಕಣ್ಣಾಡಿಸಿದ. ಅವನ ಕಣ್ಣಿಗೆ ಸಣಕಲ ಬಿದ್ದ.

'ಯಾರಯ್ಯಾ ನೀನು?' ಪೊಲೀಸ್ ಗತ್ತಿನಿಂದ ವಿಚಾರಿಸಿದ.

'ನಾನು ಅವನಿಗೆ ಲಿಫ್ಟ್ ಕೊಟ್ಟಿದ್ದೆ.'

'ನಾನು ಅವನಿಗೆ ಕೇಳಿದ್ದು. ನಿನ್ನನ್ನಲ್ಲ.'

'ನಾನೇದ್ರೂ ಅಪರಾಧ ಎಸಗಿದೆನೇನು?' ಅವನು ಕೇಳಿದ.

'ಹಾಗೇ ಕಾಣಿಸುತ್ತಿದೆ. ಇರಲಿ. ನೀನೊಬ್ಬ ಸಾಕ್ಷಿ. ನಿನ್ನ ಬಳಿ ಆಮೇಲೆ ಮಾತನಾಡುತ್ತೇನೆ' ಎನ್ನುತ್ತಾ ಅವನು ನನ್ನ ಕಡೆಗೆ ತಿರುಗಿದ.

'ನಿನ್ನ ಡ್ರೈವಿಂಗ್ ಲೈಸೆನ್ಸ್?' ಅವನು ಕೈ ಚಾಚಿದ.

ಅವನು ಜೇಬಿಗೆ ಕೈಹಾಕಿ ಎಲ್ಲರನ್ನೂ ಹೆದರಿಸುವ ರಸೀದಿ ಪುಸ್ತಕ ಹೊರತೆಗೆದ. ನನ್ನ ಹೆಸರು, ವಿಳಾಸ ಬರೆದುಕೊಂಡು ಲೈಸೆನ್ಸನ್ನು ಹಿಂದಿರುಗಿಸಿದ. ಸಾವಕಾಶವಾಗಿ ಮುಂದಕ್ಕೆ ಹೋಗಿ ಕಾರಿನ ನಂಬರನ್ನು ಬರೆದುಕೊಂಡ. ಹಾಗೆಯೇ ದಿನಾಂಕ, ಅಪರಾಧ ಜರುಗಿದ ವೇಳೆಯನ್ನು ರಸೀದಿಯ ಮೇಲೆ ಬರೆದುಕೊಂಡ. ಮೇಲಿನ ಪ್ರತಿ ನನಗೆ ಕೊಡುವ ಮುನ್ನ, ತನ್ನ ಪುಸ್ತಕದಲ್ಲಿ ನಕಲು ಸರಿಯಾಗಿ ಬಿದ್ದಿರುವುದನ್ನು ಪರೀಕ್ಷಿಸಿದ. ನಂತರ ನನ್ನ ಸಹಪ್ರಯಾಣಿಕನ ಕಡೆಗೆ ತಿರುಗಿದ.

ಜೇಬಿನಿಂದ ಒಂದು ಪುಟ್ಟ ನೋಟ್ ಬುಕ್ಕನ್ನು ಹೊರತೆಗೆದು ಅವನ ಕಿಟಕಿಯ ಬಳಿಗೆ ಸಾಗಿ,

'ನಿನ್ನ ಹೆಸರು' ಎಂದ.

'ಮೈಕಲ್ ಫಿಶ್.'

'ವಿಳಾಸ?'

'ನಂ. ಹದಿನಾಲ್ಕು, ವಿಂಡ್ಸರ್ ಲೇನ್, ಲಂಡನ್' ಎಂದ ಸಣಕಲ.

'ಇದನ್ನು ದೃಢೀಕರಿಸಲು ಏನಾದರೂ ಪುರಾವೆಗಳಿದ್ದರೆ ಕೊಡು.' ಅವನೂ ಡ್ರೈವಿಂಗ್ ಲೈಸನ್ಸ್‌ಅನ್ನು ಕೊಟ್ಟ. ಅದನ್ನು ಪರಿಶೀಲಿಸಿ ಪೊಲೀಸ್ ಆಫೀಸರ್ ವಾಪಸ್ಸು ಕೊಟ್ಟ.

'ಏನು ಕೆಲಸ ಮಾಡುತ್ತಿದ್ದೀಯ?'

'ಇಂತಾದ್ದೆ ಅಂತ ಏನಿಲ್ಲ. ಸಿಕ್ಕಿದ್ದು.'

'ನಿನ್ನ ಒಡೆಯನಾರು?'

'ಸದ್ಯಕ್ಕೆ ಯಾರೂ ಇಲ್ಲ. ನಾನು ನಿರುದ್ಯೋಗಿ.'

ಅವನು ಎಲ್ಲವನ್ನೂ ತನ್ನ ನೋಟ್‌ಬುಕ್ಕಿನಲ್ಲಿ ಬರೆದುಕೊಂಡ.

'ನಾನು ಸ್ಟೇಶನಿಗೆ ಹೋದಮೇಲೆ ನಿನ್ನ ಬಗ್ಗೆ ಮಾಹಿತಿ ತೆಗೆದುಕೊಳ್ಳುತ್ತೇನೆ. ಗೊತ್ತಾಯ್ತೇ?'

'ನನ್ನ ಬಗ್ಗೆಯೇ ಆಫೀಸರ್? ನಾನಂತಾದ್ದೂ ಏನು ಮಾಡಿದೆ?'

'ನೀನ್ಯಾಕೋ ನನಗೆ ಅನುಮಾನಾಸ್ಪದ ವ್ಯಕ್ತಿಯಂತೆ ಕಾಣಿಸುತ್ತಿದ್ದೀಯ, ಅದಕ್ಕೇ! ನಮ್ಮ ಸಂಗ್ರಹದಲ್ಲಿ ನಿನ್ನ ಭಾವಚಿತ್ರವಿದ್ದರೂ ಇದ್ದೀತು. ಹೇಳೋಕ್ಕಾಗುವುದಿಲ್ಲ!' ಎಂದ.

ಅವನು ಕಾರಿಗೆ ಒಂದು ಸುತ್ತು ಹೊಡೆದು ಮತ್ತೆ ನನ್ನ ಬಳಿಗೆ ಬಂದ.

'ನೀನು ತುಂಬಾ ಅಪಾಯದಲ್ಲಿದ್ದೀಯ ಎಂಬುದು ಗೊತ್ತಿದೆ ತಾನೆ?'

'ಹೌದು ಆಫೀಸರ್.'